ದಿನ ಅವರು ನೆಟ್ಟ ಹೂಗಿಡದ ಬುಡವನ್ನು ಅಭದ್ರಗೊಳಿಸಿ ನಾಶಮಾಡಿತು. ಮೊದಲೇ ಮನೆಯ ಅಂಗಳದಲ್ಲಿಯ ಕೋಳಿ ಹಿಕ್ಕೆ ಕಾಲಿಗೆ ಸಿಕ್ಕಿ ಕಿರಿಕಿರಿ ಅನುಭವಿಸಿದ ಮನೆಯವರಿಗೆ ಹೂಗಿಡಗಳ ನಾಶವು ಜಗಳಕ್ಕೆ ತಕ್ಷಣದ ಕಾರಣವಾಯಿತು. ಈ ಎರಡು ಮನೆಯವರ ಕದನಕ್ಕೆ ನಾವು ಮೂಕಸಾಕ್ಷಿಯಾದೆವು. ಕದನ ಕಾರಣವಾಗಿ ಕೋಳಿಗಳು ಕೆಲವು ದಿನದವರಗೆ ಬಂದಿಯಾದವು. ಹೊರಬಿಟ್ಟ ತಕ್ಷಣವೆ ನೆರಮನೆಗೆ ಹೋಗುವುದು ತನ್ನ ಆಜನ್ಮಸಿದ್ಧ ಹಕ್ಕೆಂಬಂತೆ ದಾಳಿ ಮುಂದುವರೆಯಿತು. ಹೀಗೆ ಎರಡು ಮನೆಗಳ ಕದನ ನಿರಂತರ ಜಾರಿಯಲ್ಲಿರುವಂತೆ ಮಾಡಿದ ಶ್ರೇಯಸ್ಸು ಕೋಳಿಗಳಿಗೆ ಸಲ್ಲುತ್ತದೆ. ಕೆಲದಿನದ ನಂತರ ವಿಸ್ಮಯವೆಂಬಂತೆ, ಸೂರ್ಯ ಮುಳುಗಿ ಮತ್ತೆ ಉದಯಿಸುವ ವೇಳೆಗೆ ಎರಡು ಮನೆಯವರ ನಡುವೆ ಗೆಳೆತನ ಬೆಳೆದಿದೆ. ನೆರೆಮನೆಯವರ ಜಗಳವನ್ನು ಕಂಡು ಒಳಗೊಳಗೆ ಸುಖಿಸುತಿದ್ದ ನನಗೆ ಈ ಕದನ ವಿರಾಮವನ್ನು ಒಪ್ಪಿಕೊಳ್ಳಲು ಇಂದಿಗೂ ಸಾಧ್ಯವಾಗಿಲ್ಲ. ಏಕಾಏಕಿ ಈ ಎರಡು ಮನೆಯವರನ್ನು ಬೆಸೆದ ತಂತು ಯಾವುದು ಎಂಬ ನನ್ನ ಕುತೂಹಲದ ಸಂಶೋಧನೆಗೆ ಕೊನೆಗೂ ಉತ್ತರ ಸಿಕ್ಕಿತು. ಈ ಮನೆಯವರನ್ನು ಬೆಸೆದದ್ದು ಅದೇ ಕೋಳಿಯೇ. ಜಗಳ ಕಾದ ಮನೆಯವರು ತಮ್ಮ ಬೀಡುನಲ್ಲಿರುವ ದೈವ್ಯದ ಕಲ್ಲಿಗೆ ವರುಷಕ್ಕೊಮ್ಮೆ ಪೂಜೆ ಸಲ್ಲಿಸುವುದು ವಾಡಿಕೆ. ಆ ಕಲ್ಲಿಗೆ ಊರ್ಕೋಳಿಯ ರಕ್ತಬಿದ್ದರಷ್ಟೆ ಶಾಂತಿ. ಅವರ ದುರದೃಷ್ಟಕ್ಕೆ ಆ ಸಮಯದಲ್ಲಿ ಎಲ್ಲಿಯೂ ಕೋಳಿ ಸಿಗಲಿಲ್ಲ. ಅವರ ಒದ್ದಾಟ ಕಂಡು ನಮ್ಮ ಪಕ್ಕದ ಮನೆಯವರು ಕೋಳಿಯ ಸ್ನೇಹಹಸ್ತ ಚಾಚಿದರು. ಆಪತ್ತಿಗಾದವನೆ ನೆಂಟನೆಂಬಂತೆ ಮುರುಟಿದ ಸಂಬಂಧ ಚಿಗುರಿತು. ಕೋಳಿ ಕಾರಣಕ್ಕೆ ಸೃಷ್ಟಿಯಾದ 'ಕೋಳೀಜಗಳ'ವೊಂದು ಕೋಳಿಯಿಂದಲೇ ಕೊನೆಯಾದದ್ದು ಜಗತ್ತಿನ ಅಚ್ಚರಿಗಳಲ್ಲಿ ಒಂದೆಂದು ನಾನು ಪರಿಗಣಿಸುತ್ತೇನೆ.

ಕೋಳಿ ಅಂಕಕ್ಕೆ ಕೋಳಿಯನ್ನು ತೆಗೆದುಕೊಂಡು ಹೋಗುವವರಲ್ಲಿ ಒಂದು ನಂಬಿಕೆಯಿದೆ. ಕೋಳಿಯನ್ನು ಪೂರ್ವ ದಿಕ್ಕಿಗೆ ಮುಖಮಾಡಿ ಚೀಲಕ್ಕೆ ಹಾಕಿದರೆ ಮಾತ್ರ ಗೆಲುವು ಲಭಿಸುತ್ತದೆ ಎಂಬುದೇ ಆ ನಂಬಿಕೆಯಾಗಿದೆ. ಮರೆತು ಪಶ್ಚಿಮ ದಿಕ್ಕಿಗೆ ಮುಖಮಾಡಿ ಹಾಕಿದರೆ ಸೋಲು ಖಚಿತ ಎಂದು ನಂಬುತ್ತಾರೆ. ಇದರ ಸತ್ಯಾಸತ್ಯತೆ ಏನೇ ಇರಲಿ, ಪೂರ್ವ ಸೂರ್ಯ ಉದಯಿಸುವ ದಿಕ್ಕು; ಉದಯವೆಂದರೆ ವೃದ್ಧಿ, ಬೆಳವಣಿಗೆ. ಪಶ್ಚಿಮ ಮುಳುಗುವ ದಿಕ್ಕು. ಮುಳುಗು ಎಂಬುದು ನಾಶವಲ್ಲವೆ? ಇದು ಇಂತಹ ಹವ್ಯಾಸಿಗಳಿಗೆ ಎಷ್ಟು ಅರ್ಥಪೂರ್ಣ ಸಂಕೇತವಲ್ಲವೇ? ಕೋಳಿಯ ಕುರಿತ ಕಥನ ಎಂದೂ ಮುಗಿಯದ ಕಥೆ. ಅದರ ಕಥನವಿಲ್ಲದ ನಾಡು ಸಿಗಲಾರದು ಎಂಬುದು ನನ್ನ ಬಲವಾದ ನಂಬುಗೆ. ಇನ್ನಾದರು ನಮ್ಮ ಅಧ್ಯಯನಕಾರರ ದೃಷ್ಟಿ, ನಿಮ್ಮ ದೃಷ್ಟಿ ಕೋಳಿಯ ಮೇಲೆ ಬೀಳಲಿ, ಕೋಳಿಯ ಚರಿತ್ರೆ ಬೆಳೆಯಲಿ, ಕೋಳಿಯ ಪ್ರೇಮ ಹೆಚ್ಚಲಿ ಎಂದು ಆಶಿಸೋಣ.

**ಸುಧಾಕರ ದೇವಾಡಿಗ ಬಿ.**

ಕುಂದಾಪುರ ಸಮೀಪದ ಕೋಟೇಶ್ವರದವರು. ಲಲಿತ ಪ್ರಬಂಧ ಪ್ರಕಾರದ ಕುರಿತ ಅಧ್ಯಯನಕ್ಕೆ ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ದೊರೆತಿದೆ. ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕ. ಅವರ ಪ್ರಕಟಿತ ಕೃತಿ: 'ಉಳಿದ ಆಕಾಶ'.